ರಾಜ್ಯದಲ್ಲಿ ಅಂತರ್ಜಲ ಹೆಚ್ಚಿಸುವುದು.

260(2633) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) :— ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಅಂತರ್ಜಲ ಹೆಚ್ಚಿಸಲು ಕೈಗೊಂಡ ಕ್ರಮಗಳೇನು? ಮಾಹಿತಿ ನೀಡುವುದು;

ಆ) ಅಂತರ್ಜಲ ಹೆಚ್ಚಿಸಲು ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಇ) ಯಾವ ಯಾವ ಭಾಗದಲ್ಲಿ ಅಂತರ್ಜಲ ಹೆಚ್ಚಾಗಿದೆ ವಿವರ ನೀಡುವುದು;

ಈ) ಇದೇ ರೀತಿ ನೀರಿನ ದುರ್ಬಳಕೆ ಆದಲ್ಲಿ 2005-2010 ಇಸವಿ ಒಳಗೆ ಕುಡಿಯುವ ನೀರಿಗೆ (ಅಹಾಕಾರ) ತೀವ್ರ ಬರ ಉಂಟಾಗಬಹುದಲ್ಲವೆ? (ನಿಜವಲ್ಲವೇ?)

ಉ) ಹಾಗಿದ್ದಲ್ಲಿ ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಅಂತರ್ಜಲ ಹೆಚ್ಚಿಸಲು ಸರ್ಕಾರ ಹಾಕಿಕೊಂಡ ಕಾರ್ಯಗಳೇನು? ವಿವರ ನೀಡುವುದು.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :—

ಅ) ಅಂತರ್ಜಲ ಮಟ್ಟವನ್ನು ವೃದ್ಧಿಪಡಿಸಲು ಇಲಾಖೆಯು ಅಂತರ್ಜಲ ಕೃತಕ ಮರುಪೂರ್ಯಿಕೆ ರಚನೆಗಳಾದ ನಾಲಾಬಂಡ್, ಕೃತಕ ಡ್ಯೆಕ್, ಚೆಕ್‌ಡ್ಯಾಂ, ಇಂಗು ಬಾವಿಗಳು, ಗೋಕಟ್ಟೆಗಳಲ್ಲಿ ಹೂಳೆತ್ತುವುದು ಇತ್ಯಾದಿಗಳನ್ನು ಇಲಾಖೆಯು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಕಳೆದ 6 ವರ್ಷಗಳಿಂದ ಅನುಷ್ಠಾನಗೊಳಿಸುತ್ತಿದೆ.

ಆ) ರಾಜ್ಯದಲ್ಲಿ ಅಂತರ್ಜಲ ಮಟ್ಟವನ್ನು ವೃದ್ಧಿಪಡಿಸುವ ಸಲುವಾಗಿ 1995-96ನೇ ಸಾಲಿನಿಂದ 2000-01ನೇ ಸಾಲಿನವರೆಗೆ ಆಯ್ದ 20 ಜಿಲ್ಲೆಗಳಲ್ಲಿ ಇಲಾಖಾಮತಿಯಿಂದ ಒಟ್ಟು 464 ವಿವಿಧ ಅಂತರ್ಜಲ ಕೃತಕಮರುಪೂರ್ಯಿಕೆಯ ರಚನೆಗಳನ್ನು ರೂ 473.06 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ.

ಇ) ಇಲಾಖೆಯು ಈಗಾಗಲೇ ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕು ಹಾಗೂ ದೇವನಹಳ್ಳಿ ತಾಲ್ಲೂಕಿನಲ್ಲಿ ನಿರ್ಮಾಣ ಮಾಡಿರುವ ವಿವಿಧ ರಚನೆಗಳ ಅಕ್ಕಪಕ್ಕದಲ್ಲಿರುವ ಕೊಳವೆ : ತೋಡು ಬಾವಿಗಳಲ್ಲಿ ಅಂತರ್ಜಲ ಮಟ್ಟವು ವೃದ್ಧಿಯಾಗಿರುವುದಾಗಿ ಸ್ಥಳೀಯ ಸಮೀಕ್ಷೆಯಿಂದ ತಿಳಿದು ಬಂದಿದೆ.

ಈ) ಹೌದು, ಕೆಲವು ಸ್ಥಳಗಳಲ್ಲಿ ತೀವ್ರ ಬರ ಉಂಟಾಗುವ ಸಾಧ್ಯತೆ ಇದೆ.

ಉ) ಅಂತರ್ಜಲವನ್ನು ವೃದ್ಧಿಪಡಿಸುವ ಸಲುವಾಗಿ ಜಲ ಸಂಪನ್ಮೂಲ ಕ್ರೋಢೀಕರಣ ಯೋಜನೆ "Water Resources Consolidation Project" (Ground Water Component) ಯಡಿಯಲ್ಲಿ ರೂ. 471.00 ಕೋಟಿ ವೆಚ್ಚದ ಒಂದು ಯೋಜನೆಯನ್ನು ರಾಜ್ಯದ 58 ತಾಲ್ಲೂಕುಗಳಲ್ಲಿ ಒಟ್ಟು 50,221 ವಿವಿಧ ರಚನೆಗಳನ್ನು ಮುಂದಿನ 5 ವರ್ಷಗಳಲ್ಲಿ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಇಲಾಖೆಯು ಹಮ್ಮಿಕೊಂಡಿದೆ. ಇದಲ್ಲದೆ 2001-2002 ನೇ ಸಾಲಿನಲ್ಲಿ ರಾಜ್ಯದಲ್ಲಿ ಕುಡಿಯುವ ನೀರಿನ ಮೂಲಗಳ ಪುನಶ್ಚೇತನಕ್ಕಾಗಿ ಸರ್ಕಾರವು ರೂ. 18.00ಕೋಟಿ ಅನುದಾನವನ್ನು ಬಿಡುಗಡೆ ಮಾಡಿದೆ.

ಶ್ರೀ ಜಿ.ಟಿ. ಪಾಟೀಲ್:— ಮಾನ್ಯ ಅಧ್ಯಕ್ಷರೆ, ಅಂತರ್ಜಲ ಮಟ್ಟವನ್ನು ವೃದ್ಧಿಪಡಿಸಲು ಕಳೆದ ಆರು ವರ್ಷಗಳಲ್ಲಿ ಸುಮಾರು 4 ಕೋಟಿ 73 ಲಕ್ಷ ರೂ. ಖರ್ಚು ಮಾಡಲಾಗಿದೆಯೆಂದು ಉತ್ತರದಲ್ಲಿ ಹೇಳಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ಇದಕ್ಕಾಗಿ 471 ಕೋಟಿ ರೂ. ಖರ್ಚು ಮಾಡಲು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆಂದು ತಿಳಿಸಿರುತ್ತಾರೆ. ಇದಕ್ಕಾಗಿ ಮಾನ್ಯ ಕೃಷ್ಣರವರ ನೇತೃತ್ವದ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವೇನು ಕಳೆದ ಆರು ವರ್ಷಗಳಲ್ಲಿ ಅಂತರ್ಜಲ ವೃದ್ಧಿಗಾಗಿ ಹಣವನ್ನು ಖರ್ಚು ಮಾಡಿದ್ದೀರಿ ಅದರಿಂದ ಸರಿಯಾಗಿ ಕೆಲಸಗಳು ಆಗಿದೆಯೇ? ಇಪ್ಪತ್ತು ಜಿಲ್ಲೆಗಳಲ್ಲಿ ಅಂತರ್ಜಲವನ್ನು ಹೆಚ್ಚು ಮಾಡಲು ಹಣವನ್ನು ಖರ್ಚು ಮಾಡಿರುವುದಾಗಿ ತಿಳಿಸಿದ್ದೀರಿ, ಹಾಗಾದರೆ ಎಲ್ಲೆಲ್ಲಿ ಅಂತರ್ಜಲವನ್ನು ಹೆಚ್ಚು ಮಾಡಿದ್ದೀರೆಂದರೆ ಬೆಂಗಳೂರು ಜಿಲ್ಲೆಯ ಅನೇಕಲ್ ತಾಲ್ಲೂಕು ಮತ್ತು ದೇವನಹಳ್ಳಿಗಳಲ್ಲಿ ಮಾಡಿದ್ದೀವೆಂದು ಹೇಳಿದ್ದಾರೆ. ಹಾಗಾದರೆ ಬೇರೆ ಜಿಲ್ಲೆಗಳಲ್ಲಿ ಏಕೆ ಆ ಕೆಲಸವನ್ನು ಮಾಡಿಲ್ಲ? ನನ್ನ ಸ್ವಂತ ಬಾವಿಯಲ್ಲಿ ಮೊದಲು 50 ಅಡಿಗಳಿಗೇ ನೀರು ಸಿಗುತ್ತಿತ್ತು. ನನ್ನ ಕ್ಷೇತ್ರದ ಮೇಲುಭಾಗದಲ್ಲಿ ಕೃಷ್ಣ ಯೋಜನೆ ಇದೆ, 150 ಅಡಿಗಳಿಗೇ ಸುಮಾರು ಇಪ್ಪತ್ತು ಸಾವಿರ ಗ್ಯಾಲನ್ ನೀರು ಗಂಟೆಗೆ ಸಿಗುತ್ತಿತ್ತು. ಆದರೆ ಈಗ ಅದು ಸಂಪೂರ್ಣವಾಗಿ ಬತ್ತಿಹೋಗಿದೆ. 300 ಅಡಿಗೂ ನೀರು ಸಿಗದಂಥ ಪರಿಸ್ಥಿತಿಯಾಗಿದೆ. ಕುಡಿಯುವ ನೀರಿಗೂ ನೀರು ಸಿಗುತ್ತಿಲ್ಲ. ನೀರಾವರಿ ಇರುವ ಪ್ರದೇಶಗಳಲ್ಲೇ ಹೀಗಾದರೆ ಬಾಕಿ ಪ್ರದೇಶದಲ್ಲಿ ಏನಾಗಿದೆಯೆಂಬ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಆದ್ದರಿಂದ ಮುಂದಿನ ಐದು ವರ್ಷಗಳಲ್ಲಿ ಅಂತರ್ಜಲ ಅಭಿವೃದ್ಧಿಗೆ ಏನು ಪ್ರಮುಖವಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೀರಿ?

ಶ್ರೀ ವಿ. ಮುನಿಯಪ್ಪ:— ಮಾನ್ಯ ಅಧ್ಯಕ್ಷರೆ, ಅಂತರ್ಜಲವನ್ನು ಅಭಿವೃದ್ಧಿ ಮಾಡುವ ಬಗ್ಗೆ ತಮಗೆ ಈಗಾಗಲೇ ವಿವರಣೆಯನ್ನು ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಕಪ್ಪು ಮತ್ತು ಭೂದು ಬಣ್ಣದಿಂದ ಗುರುತು ಮಾಡಿದ್ದಾರೆ. ಆ ತಾಲ್ಲೂಕುಗಳಲ್ಲಿ ಲಭ್ಯವಿರುವ ಅಂತರ್ಜಲದಲ್ಲಿ ನೂರಕ್ಕೆ

65 ರಿಂದ 85 ಪರ್‌ಸೆಂಟ್ ಮೇಲ್ಪಟ್ಟು ಈಗಾಗಲೇ ಕಪ್ಪು, ಬಣ್ಣದಿಂದ ಗುರುತಿಸಲಾಗಿದೆ. ಇನ್ನು ಮುಂದೆ ಕೊಳವೆ ಬಾವಿಗಳನ್ನು ಕೊರೆಯುವುದಿರಲಿ ಇರುವ ಬಾವಿಗಳಲ್ಲೇ ನೀರು ಬತ್ತಿ ಹೋಗುವ ಪರಿಸ್ಥಿತಿ ಇದೆ. ಇಂಥ ಪರಿಸ್ಥಿತಿಯಲ್ಲಿ ಅಂತರ್ಜಲದ ಮಟ್ಟವನ್ನು ಹೆಚ್ಚು ಮಾಡುವ ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಇಲಾಖೆಯ ಅಧಿಕಾರಿಗಳು ಮತ್ತು ಸಚಿವರ ಸಭೆಯನ್ನು ಮಾಡಿ ಅಂತರ್ಜಲದ ಮಟ್ಟ ಕುಸಿಯುತ್ತಿರುವುದರಿಂದ ಆಗುವ ದುಷ್ಪರಿಣಾಮದಿಂದ ಒಂದೊಂದು ಗ್ರಾಮದಲ್ಲಿ 7-8 ಬೋರ್‌ವೆಲ್‌ಗಳನ್ನು ಕೊರೆಯುವ ಪರಿಸ್ಥಿತಿ ಇದೆ, ಅದನ್ನು ನಿಗ್ರಹಣೆ ಮಾಡಲು ಕೆರೆಗಳ ಹೂಳನ್ನು ಎತ್ತುವುದು ಎಷ್ಟು ಮುಖ್ಯವೋ ಅದರ ಜೊತೆಗೆ ಮಳೆಯ ನೀರು ಸಂಗ್ರಹಣೆಗೆ ಒತ್ತು ಕೊಡಬೇಕಾಗುತ್ತದೆಂದು ತಿಳಿಸಿರುತ್ತಾರೆ. ಆ ಕೆಲಸವನ್ನು ಈ 75 ತಾಲ್ಲೂಕುಗಳಲ್ಲಿ ಮಾಡದಿದ್ದರೆ ಅಂತರ್ಜಲವನ್ನು ಹೆಚ್ಚು ಮಾಡಲು ಸಾಧ್ಯವಿಲ್ಲ, ನೀರಿನ ಮಟ್ಟ ಮತ್ತಷ್ಟು ಕೆಳಕ್ಕೆ ಹೋಗುವ ನಿರೀಕ್ಷೆ ಇದೆ. ಆದ್ದರಿಂದ ಈ ಸಲ ಬಜೆಟ್‌ನಲ್ಲಿ 18 ಕೋಟಿ ರೂಪಾಯಿಗಳನ್ನು ಕೃತಕ ಅಂತರ್ಜಲದ ಮರುಪೂರ್ಯಕೆಗಳಾದ ನಾಲಾಬಂಡ್, ಕೃತಕ ಡೈಕ್, ಚೆಕ್‌ಡ್ಯಾಂ, ಇಂಗು ಬಾವಿಗಳು, ಗೋಕಟ್ಟಿಗಳಲ್ಲಿ ಹೂಳೆತ್ತುವುದು ಮುಂತಾದ ಕೆಲಸಗಳಿಗಾಗಿ ಪ್ರಪ್ರಥಮವಾಗಿ ಪ್ರಾವಿಷನ್ ಮಾಡಿದ್ದೇವೆ. ಇದರ ಜೊತೆಗೆ ವಿಶ್ವಬ್ಯಾಂಕ್‌ನ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದ ಸಂದರ್ಭದಲ್ಲಿ ಅಂತರ್ಜಲದ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ವಿವರಣೆ ನೀಡಿರುತ್ತಾರೆ. ಜಲ ಸಂಪನ್ಮೂಲ ಯೋಜನೆಯ ಆಡಿಯಲ್ಲಿ 471 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯನ್ನು ಈಗಾಗಲೇ ತಯಾರು ಮಾಡಿ ವಿಶ್ವಬ್ಯಾಂಕ್‌ನ ಅಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ವಿಶ್ವಬ್ಯಾಂಕ್‌ನ ಅಧ್ಯಕ್ಷರು ಬೆಂಗಳೂರಿಗೆ ಬಂದಿದ್ದಾಗ ಅದಕ್ಕೆ ತಾತ್ವಿಕವಾಗಿ ಒಪ್ಪಿಗೆಯನ್ನು ಕೊಟ್ಟಿರುತ್ತಾರೆ. ಅಂತರ್ಜಲವನ್ನು ಹೆಚ್ಚು ಮಾಡತಕ್ಕ ಯೋಜನೆಗೆ ಪೂರಕವಾಗಿ ಈ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಕೆರೆಗಳ ಹೂಳೆತ್ತುವ ಬೃಹತ್ ಯೋಜನೆಯನ್ನು ಸಹ ಸರ್ಕಾರ ಹಾಕಿಕೊಂಡಿದೆ. ಇವೆಲ್ಲದ್ದರಿಂದ ಅಂತರ್ಜಲದ ಅಭಿವೃದ್ಧಿಯಾಗುತ್ತದೆ ಎಂಬ ನೀರಿಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ.

ಶ್ರೀ ಜೆ.ಟಿ. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ನಾಲಾಬಂಡ್, ಕೃತಕ ಡೈಕ್, ಚೆಕ್‌ಡ್ಯಾಂ, ಗೋಕಟ್ಟಿಗಳಲ್ಲಿ ಹೂಳೆತ್ತುವುದು ಈ ಕೆಲಸಗಳಲ್ಲೂ ಕಣ್ಣಿಗೆ ಮಣ್ಣೆರಚುವ ಕೆಲಸವಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ಇದಕ್ಕೆ ಸಂಬಂಧಿಸಿದಂತೆ ಕಳೆದ ಐದು ವರ್ಷಗಳಲ್ಲಿ ಏನು ಮಾಡಿದ್ದೀರಿ ಎಂಬ ಬಗ್ಗೆ ವಿವರಣೆಯನ್ನು ಸಂಬಂಧಪಟ್ಟ ಅಧಿಕಾರಿಗೆ ಕೇಳಿದ್ದೆ. ಆದರೆ ಅವರು ಇದುವರೆಗೆ ಆ ವರದಿಯನ್ನು ಕೊಟ್ಟಿಲ್ಲ. ಇಲ್ಲಿಯೂ ಸರಿಯಾಗಿ ಕೆಲಸ ಆಗುತ್ತಿಲ್ಲ. ಬಹಳಷ್ಟು ಬೋಗಸ್ ಬಿಲ್ಲಿಂಗ್ ಆಗಿದೆ. ಕೇವಲ 4 ಕೋಟಿ 73 ಲಕ್ಷ ರೂ.ಗಳ ಕೆಲಸದಲ್ಲೇ ಈ ವ್ಯವಸ್ಥೆಯಾದರೆ ಬರುವ ಐದು ವರ್ಷದಲ್ಲೇನು 471 ಕೋಟಿ ರೂಗಳ ಕಾರ್ಯಕ್ರಮವನ್ನಿಟ್ಟು ಕೊಂಡಿದ್ದೀರಿ ಅದರ ಬಗ್ಗೆ ಸರಿಯಾದ

ನಿಗಾವಹಿಸದಿದ್ದರೆ ಐವತ್ತು ಭಾಗ ಹಣವು ಸೋರಿ ಹೋಗುತ್ತದೆ. ತಾವೇನು 471 ಕೋಟಿ ರೂ. ಮತ್ತು 18 ಕೋಟಿ ರೂ.ಗಳ ಯೋಜನೆಯನ್ನು ಇಟ್ಟುಕೊಂಡಿದ್ದೀರಿ, ಅದರ ಹಣವು ನೂರು ಪರ್ಸೆಂಟ್ ಉಪಯೋಗವಾಗುವಲ್ಲಿ ಏನು ಕ್ರಮ ಇಟ್ಟುಕೊಂಡಿದ್ದೀರಿ? ತಪ್ಪಿತಸ್ಥರ ಮೇಲೆ ಕಾನೂನಿನ ಅನುಸಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲು ವ್ಯವಸ್ಥೆಯನ್ನೇನಾದರೂ ಮಾಡುತ್ತೀರಾ?

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕ್ಷೇತ್ರ ಬಹುಶ: ಬೀಳಗಿ ತಾಲ್ಲೂಕು. ಆ ತಾಲ್ಲೂಕು ಸಧ್ಯಕ್ಕೆ ಸಮಸ್ಯಾತ್ಮಕ ತಾಲ್ಲೂಕುಗಳಲ್ಲಿ ಸೇರಿಲ್ಲ. ಅವರ ತಾಲ್ಲೂಕು ಕಪ್ಪು, ಇಲ್ಲವೆ ಬೂದು ಬಣ್ಣದೆಂದು ನಮ್ಮ ಇಲಾಖೆಯವರು ಘೋಷಣೆ ಮಾಡಿಲ್ಲ. ಅವರ ಕ್ಷೇತ್ರ ಬಿಳಿ ಪ್ರದೇಶವೆಂದು ಘೋಷಣೆ ಮಾಡಿದ್ದೇವೆ. ಅವರ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಅಷ್ಟಾಗಿ ಕುಸಿದಿಲ್ಲ. ಆದರೆ ಬಿಜಾಪುರ ಜಿಲ್ಲೆಯ ಬಾಗೇವಾಡಿ, ಬಿಜಾಪುರ, ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿ ಕಪ್ಪು ಮತ್ತು ಬೂದು ಬಣ್ಣದಿಂದ ಗುರುತು ಮಾಡಿದ್ದೇವೆ. ನಾವೇನು 471 ಕೋಟಿ ರೂ.ಗಳ ಯೋಜನೆಯನ್ನು ಇಟ್ಟುಕೊಂಡಿದ್ದೇವೆ ಅದರಲ್ಲಿ ಇದಕ್ಕೆ 10 ಕೋಟಿ 83 ಲಕ್ಷ ರೂ. ಖರ್ಚು ಮಾಡಬೇಕೆಂದು ಉದ್ದೇಶಿಸಿದ್ದೇವೆ. ಇದರಲ್ಲಿ 1212 ಸ್ಟ್ರಕ್ಚರ್ಸ್‌ನ್ನು ಕಟ್ಟಬೇಕೆಂದು ಸರ್ಕಾರ ಯೋಜನೆಯನ್ನು ಹಾಕಿಕೊಂಡಿದೆ.

ಸೇಡಂ ತಾಲ್ಲೂಕಿನ ವಿದ್ಯುತ್ ಪ್ರಸರಣಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಹುದ್ದೆ.

261(2902) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವಿದ್ಯುತ್ ಪ್ರಸರಣ ಉಪವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇಲ್ಲದೇ ವಿದ್ಯುಚ್ಛಕ್ತಿಯ ಕಾರ್ಯನಿರ್ವಹಣೆಗೆ ತೊಂದರೆಯುಂಟಾಗಿರುವುದು ನಿಜವಲ್ಲವೇ?

ಆ) ಈ ಉಪ ವಿಭಾಗದಲ್ಲಿ ಈಗಾಗಲೇ ಖಾಲಿ ಇರುವ ಒಟ್ಟು ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ; (ಹುದ್ದೆಗಳ ವಿವರ ನೀಡುವುದು)

ಇ) ಇದರಿಂದ ಪ್ರತಿದಿನ ವಿದ್ಯುತ್ ಸಂಪರ್ಕಕ್ಕಾಗಿ ರೈತರು ನಾಗರೀಕರು ಎದುರಿಸುತ್ತಿರುವ ತೊಂದರೆಯಿಂದ ರೈತರ ಬೆಳೆ ಹಾನಿಯಾಗಿ ನಷ್ಟವಾಗುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ರೈತರಿಗೆ ನಾಗರೀಕರಿಗೆ ನಷ್ಟವಾಗುವುದನ್ನು ತಪ್ಪಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಯನ್ನು ತುಂಬಿ ಕೂಡಲೇ ಅನುಕೂಲ ಮಾಡಿಕೊಡಲಾಗುವುದೇ?